# ಕ್ಲಾಸಿನಲ್ಲಿ ಕಷ್ಟ-ಸುಖ



**ಗುರು ಶಿಷ್ಯರ ನಡುವಣ ಪಾಠ ಪ್ರವಚನಗಳಲ್ಲಿ ನಗುವಿಗೇನೂ ಕೊರತೆ ಇರುವುದಿಲ್ಲ. ಆ ನಗುವಿನ ಹಿಂದೆ ತುಂಟತನ ಕಾಣಿಸಿದರೂ, ನಗುವಿನ ಲಹರಿಯ ಹಿಂದೆ ಬದುಕಿನ ಸಂಕಷ್ಟಗಳೂ ಇಣುಕುತ್ತವೆ. ಕ್ಲಾಸಿನಲ್ಲಿನ ಕಷ್ಟ–ಸುಖಗಳನ್ನು ಚಿತ್ರಿಸುವ ಈ ಬರಹ, ಗ್ರಾಮೀಣ ಪ್ರದೇಶದ ತವಕ ತಲ್ಲಣಗಳನ್ನೂ ಕಾಣಿಸುತ್ತದೆ.**

**ಲಕ್ಷ್ಮಣ ಬಾದಾಮಿ**
ಕಲೆ: ಸಂತೋಷ್ ಸಸಿಹಿತ್ಲು

ಇತ್ತೀಚೆಗೆ ಹತ್ತನೇ ತರಗತಿಗೆ ಮಾಡಿದ್ದ ರೂಪಣಾತ್ಮಕ ಮೌಲ್ಯಮಾಪನದ ಪೇಪರ್‌ಗಳನ್ನು ಚೆಕ್ ಮಾಡುತ್ತಿದ್ದೆ. ಒಬ್ಬ ವಿದ್ಯಾರ್ಥಿ ಕಂಠಪಾಠದ ಪದ್ಯವನ್ನು ಪೂರ್ಣಗೊಳಿಸಿದ್ದನ್ನು ನೋಡಿ ಒಂದು ಕ್ಷಣ ಗಲಿಬಿಲಿಯಾಯಿತು! ವಿದ್ಯಾರ್ಥಿ ಬರೆದಿದ್ದ 'ಕಲ್ಲು ಸತ್ತ ಮೇಲೆ...' ಎಂಬಿತ್ಯಾದಿ ಪದಗಳನ್ನೋದಿ ನಾನು ಕೊಟ್ಟಿದ್ದ ಪದ್ಯ ಯಾವುದು, ಇವನು ಬರೆದಿದ್ದು ಯಾವುದು ಅಂತ ಯೋಚಿಸತೊಡಗಿದೆ. ಪ್ರಶ್ನೆಪತ್ರಿಕೆ ತೆಗೆದು ನೋಡಿದರೆ ನಾನು ಕೊಟ್ಟಿದ್ದ ಪದ್ಯಕ್ಕೆ ಇವನು ಬರೆದ ಉತ್ತರ ನೋಡಿ ಹೌಹಾರಿ ಹೋದೆ! ಕವಿ ಜಿ.ಎಸ್. ಶಿವರುದ್ರಪ್ಪ ಅವರ 'ಸಂಕಲ್ಪಗೀತೆ'ಯ 'ಕಲುಷಿತವಾದೀ ನದಿ ಜಲಗಳಿಗೆ/ ಮುಂಗಾರಿನ ಮಳೆಯಾಗೋಣ...' ಎಂಬ ಪದ್ಯವನ್ನು ನಾನು ಪೂರ್ಣಗೊಳಿಸಲು ಹೇಳಿದ್ದರೆ ಈ ವಿದ್ಯಾರ್ಥಿ ಮಹಾನುಭಾವ, 'ಕಲ್ಲುಸತ್ತ ಮೇಲೆ...' ಅಂತ ಇನ್ನೂ ಏನೇನೋ ಬರೆದಿದ್ದ. ಶಿವ ಶಿವ, ಓ... ಕರ್ನಾಟಕ ಹೃದಯಶಿವ, ಹಿಂಗಾದರೆ ಹೆಂಗ್ ನಮ್ಮ ಕನ್ನಡದ ಕತೆ! ಎಂದುಕೊಂಡು ಪೇಪರ್‌ಗಳನ್ನು ಚೆಕ್ ಮಾಡುವುದು ಬಿಟ್ಟು ವಿಚಾರಕ್ಕೆ ಬಿದ್ದೆ.

ಮೂವತ್ತು ವರ್ಷಗಳ ಹಿಂದೆ ನಾನು ವಿದ್ಯಾರ್ಥಿಯಾಗಿದ್ದ ಕಾಲಕ್ಕೂ ಮತ್ತು ಈಗ ನಾನು ಮಾಸ್ತರನಾಗಿರುವ ಈ ಕಾಲಕ್ಕೂ ಹೋಲಿಸಿದರೆ ಶಿಕ್ಷಣದ ಗುಣಮಟ್ಟ ಏನಾದರೂ ಬದಲಾಗಿದೆಯೇ ಅಂತ ಆಲೋಚಿಸಿದರೆ ಅಂಥದೇನೂ ಕಾಣಿಸುವುದೇ ಇಲ್ಲ. ಆವತ್ತು ಇಡೀ ಕ್ಲಾಸಿನಲ್ಲಿ ಒಂದ್ ಆರೇಳು ಜನ ಚಲೋ ಓದುವವರು (ಇದರಲ್ಲಿ ನಾನೂ ಒಬ್ಬ ಅನ್ನೋದು ನನ್ನ ನಂಬಿಕೆ!), ಅರ್ಧದಷ್ಟು ಜನ ಮಧ್ಯಮ ಕ್ರಮಾಂಕದಲ್ಲಿ ಇರುವವರು, ಇನ್ನೊಂದಿಷ್ಟು ಜನ ದಡ್ಡಶಿಖಾಮಣಿಗಳು ಇರುತ್ತಿದ್ದೆವು. ಈಗಲೂ ಈ ಓದಿನ ಗುಣಮಟ್ಟದ ಶ್ರೇಣೀಕರಣ ಹಾಗೆಯೇ ಇದೆ. ಕರೆಯಲಾಗುವ ಪದಗಳು ಮಾತ್ರ ಬದಲಾಗಿವೆಯೇ ವಿನಾ ಪದಾರ್ಥಗಳು ಹಾಗೆಯೇ ಇವೆ. ಓದು–ಬರಹ ಬಾರದ ವಿದ್ಯಾರ್ಥಿಗಳನ್ನು ಈಗ 'ಕಲಿಕೆಯಲ್ಲಿ ಹಿಂದುಳಿದ ಮಕ್ಕಳು' ಎನ್ನುತ್ತೇವೆ. ಇರಲಿ, ಈಗ ನಾನು ವಿದ್ಯಾರ್ಥಿಯಾಗಿದ್ದ ಶಾಲಾ ದಿನಗಳ ಕಡೆ ಸ್ವಲ್ಪ ಹೋಗಿ ಬರೋಣ.

ನಮ್ಮ ಕನ್ನಡ ಸರ್, ಪಾಠ ಆದ ಮೇಲೆ ವಿದ್ಯಾರ್ಥಿಗಳನ್ನು ಒಬ್ಬೊಬ್ಬರಾಗಿ ಎದ್ದು ನಿಲ್ಲಿಸಿ ಓದಿಸಾಕ ಶುರು ಮಾಡೋರು. ಮುಂದಿನ ಬೆಂಚಿನವರು, ನಡುವಿನ ಬೆಂಚ್‌ನವರು ಓದಿದ ಮೇಲೆ ಲಾಸ್ಟ್ ಬೆಂಚ್‌ಗಳಿಗೆ ಸರದಿ ಬರುವಾಗ ಕ್ಲಾಸಿನಲ್ಲಿ ಸಣ್ಣದಾಗಿ ಸೌಂಡು ಶುರುವಾಗಿರುತ್ತಿತ್ತು. ಇದೇ ಸುವರ್ಣಾವಕಾಶ ಎಂದು ಬಗೆದ ಆ ಕೊನೆ ಸಾಲಿನವರು ಗುನುಗುನು ಏನೋ ಓದಿ ಕುಳಿತುಬಿಡುತ್ತಿದ್ದರು. ಇದು ಹೀಗೇ ನಡೆಯುತ್ತಿತ್ತು. ಒಂದಿನ ನಮ್ಮ ಸರ್‌ಗೆ ಈ ಗುನುಗುನು ಓದುವವವರ ಮೇಲೆ ಅನುಮಾನ ಬಂದು, 'ಲೇಯ್ ಜೋರಾಗಿ ಓದು...' ಅಂತ ಆವಾಜ್ ಹಾಕಿದರೂ, ಆಗ ಓದಲು ನಿಂತಿದ್ದ ಅಶೋಕನ ದನಿಯೇನು ದೊಡ್ಡದಾಗಲಿಲ್ಲ. 'ಲೇ... ಅಂವ ಏನು ಓದ್ತಾನ ಕೇಳಿಸ್ಕೊಂಡು ಬಾ' ಅಂತ ನನ್ನ ಹಿಂದಕ್ಕೆ ಕಳಿಸಿದರು. ಅದಾಗಲೇ ಅವನ ಪಕ್ಕದಲ್ಲಿ ಕೂತವರು ತಮ್ಮ ನಗುವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದ್ದರು. ನಾನು ಹೋಗಿ ಅವನು ಓದುವುದನ್ನು ಕೇಳುತ್ತಿದ್ದಂತೆ ನನಗೂ ನಗು ಹತ್ತಿಯೇ ಬಿಡ್ತು! ಕ್ಲಾಸಿನ ಎಲ್ಲಾ ಹುಡುಗ–ಹುಡುಗಿಯರ ಗೋಣುಗಳು ಓದಲು ನಿಂತಿದ್ದ ಅಶೋಕನತ್ತ ಮತ್ತು ನನ್ನತ್ತ ತಿರುಗಿಕೊಂಡವು. ಸರ್, 'ಯಾಕೋ... ಏನಾತು?' ಎಂದಾಗ, ನನಗೆ ನಗೆ ಉಕ್ಕುಕ್ಕಿ ಬರುತ್ತಿದ್ದರಿಂದ ಮಾತೇ ಬರಲಿಲ್ಲ. 'ಏಯ್ ಓದಲೇ ಜೋರಾಗಿ...' ಅವನತ್ತ ಕೆಕ್ಕರಿಸಿದರು. ಆಗ ಅಂಜಿಕೊಂಡ ಅಶೋಕ 'ಖಾರ–ಬೆಲ್ಲ, ಖಾರ–ಬೆಲ್ಲ, ಖಾರ–ಬೆಲ್ಲ, ಖಾರ–ಬೆಲ್ಲ...' ಅಂತ ಓದುತ್ತಿದ್ದಂತೆ ಕ್ಲಾಸಿನ ತುಂಬ ಬಗೆಬಗೆಯ ನಗೆಗಳು ಚಿಮ್ಮತೊಡಗಿದವು.

ಸರ್‌ಗೆ ಅವನೋದಿದ್ದು ಕೇಳಿ ವಿಚಿತ್ರ, ಆಶ್ಚರ್ಯ ಒಟ್ಟಿಗೆ ಆಗಿ ಅವರ ಮುಖದಲ್ಲೂ ನಗೆ ಕಾಣಿಸಿತು. ಅವರು ಪ್ಲಾಟ್‌ಫಾರಂ ಇಳಿದು ನಮ್ಮೆಡೆಗೆ ಬರತೊಡಗಿದರು. ಕ್ಲಾಸಿನಲ್ಲಿ ಸೌಂಡು ಅಡಗಿತು. ನಾನು ಹಗೂರಕೆ ನನ್ನ ಬೆಂಚಿನತ್ತ ಬಂದೆ. ಇಷ್ಟು ದಿನದ ಅಶೋಕನ ಓದಿನ ಗುಟ್ಟು ಈಗ ರಟ್ಟಾದ್ದರಿಂದ ಅವನು ಮುಖ ಕೆಳಗುಂದಿಸಿಕೊಂಡು, ಗೋಣು ಕೆಳಗೆ ಮಾಡಿ